1

# ವಂದನೆಗಳು ಮತ್ತು ಉದ್ದೇಶ

# (1-4)

## ಪ್ರಾರಂಭದ ವಂದನೆಗಳು (1, 2)

**[1]ಯೇಸು ಕ್ರಿಸ್ತನ ದಾಸನೂ ಯಾಕೋಬನ ತಮ್ಮನೂ ಆಗಿರುವ ಯೂದನು ತಂದೆಯಾದ ದೇವರಲ್ಲಿ ಪ್ರಿಯರಾದವರೂ ಯೇಸು ಕ್ರಿಸ್ತನಿಗಾಗಿ ಕಾಯಲ್ಪಟ್ಟವರೂ ಆಗಿರುವವರಿಗೆ ಬರೆಯುವದೇನೆಂದರೆ [2]ದೇವರಿಂದ ಕರೆಯಲ್ಪಟ್ಟ ನಿಮಗೆ ಕರುಣೆಯೂ ಶಾಂತಿಯೂ ಪ್ರೀತಿಯೂ ಹೆಚ್ಚಾಗಲಿ.**

ಪತ್ರಿಕೆಯಲ್ಲಿರುವ ಪ್ರಾರಂಭದ ಪದಗಳು ಇತರ ಪತ್ರಿಕೆಗಳಲ್ಲಿರು ಪ್ರಾರಂಭದ ಪದಗಳಿಗೆ ಸಮಾನಾಗಿವೆ. ಲೇಖಕನು ತನ್ನನ್ನು ತಾನು ಪರಿಚಯಿಸಿಕೊಳ್ಳುತ್ತಾನೆ ಮತ್ತು ತನ್ನ ಶೋತ್ರುಗಳನ್ನು ಸಂಬೋಧಿಸುತ್ತಾನೆ ಮತ್ತು ಶುಭ ವಂದನೆಗಳನ್ನು ತಿಳಿಸುತ್ತಾನೆ.

**ವಚನ 1. ಯೂದನು** ತನ್ನನ್ನು ತಾನು **ಯೇಸು ಕ್ರಿಸ್ತನ ದಾಸನೂ ಯಾಕೋಬನ ತಮ್ಮನೂ** ಎಂದು ಕರೆದುಕೊಳ್ಳುತ್ತಾ ಪ್ರಾರಂಭಿಸುತ್ತಾನೆ. "ಯಾಕೋಬ" ಎಂಬ ಹೆಸರು ಬಹಳ ಮಟ್ಟಿಗೆ ಕರ್ತನ ಸಹೋದರನನ್ನು ಉಲ್ಲೇಖಿಸುತ್ತದೆ (ಗಲಾತ್ಯ 1:19; ಯಾಕೋಬ 1:1). ಯೇಸುವಿನ ಪ್ರಾರಂಭದ ಸೇವೆಯಲ್ಲಿ ಅವನ ಸಹೋದರರು ಅವನು ತನ್ನ ಮನಸ್ಸಿನ ಸ್ತಿಮಿತವನ್ನು ಕಳೆದುಕೊಂಡಿದ್ದಾನೆ ಎಂದು ಭಾವಿಸಿದ್ದರು (ಮಾರ್ಕ 3:21, 31; ಯೋಹಾನ 7:5), ಆದರೆ ನಂತರ ಈ ಮನುಷ್ಯರು ವಿಶ್ವಾಸಿಗಳಾದರು (ಅಪೊಸ್ತಲರ ಕೃತ್ಯಗಳು 1:14; 1 ಕೊರಿಂಥ 9:5). ಯೂದ ಮತ್ತು ಯಾಕೋಬನ ಪತ್ರ ಒಟ್ಟಾಗಿ ಅಪೊಸ್ತಲರ ಕೃತ್ಯಗಳಲ್ಲಿರುವ ಸಲಹಾತ್ಮಕ ಪದಗಳನ್ನು ಮತ್ತು ಸೂಚ್ಯ ಉಲ್ಲೇಖಗಳನ್ನು ಕೆಲವು ಪೂರ್ವ - ಅಪೊಸ್ತಲರ ಬರವಣಿಗೆಯಿಂದಾಗಿ ಉಳಿದಿವೆ, ಅವು ಕೆಲವರಿಗೆ ಯೇಸುವಿನ ಕುಟುಂಬವು ಅದು ಗುರುತಿಸಲ್ಪಡುವ ರೀತಿಗಿಂತ ಹೆಚ್ಚು ಪ್ರಭಾವಶಾಲಿಯಾದ ಪಾತ್ರವನ್ನು ಆದಿ ಯೆರೂಸಲೇಮಿನ ದೇವಾಲಯದ ದಿನನಿತ್ಯದ ಜೀವಿತದಲ್ಲಿ ವಹಿಸತ್ತು ಎಂದು ವಾದಿಸುತ್ತವೆ.[1]

ಮತ್ತಾಯ 13:55ರಲ್ಲಿ ಸಹೋದರರನ್ನು "ಯಾಕೋಬ ಮತ್ತು ಯೋಸೇಫ ಮತ್ತು ಸಿಮೋನ ಮತ್ತು ಯೂದ" ಎಂದು ಪಟ್ಟಿ ಮಾಡಲಾಗಿದೆ. ಮಾರ್ಕನ ಹೇಳಿಕೆಯಲ್ಲಿ "ಯಾಕೋಬ ಮತ್ತು ಯೋಸೆ ಮತ್ತು ಯೂದ ಸಿಮೋನ" (ಮಾರ್ಕ 6:3). ಇನ್ನೊಂದು ಕ್ರಮಕ್ಕೆ ತೃಪ್ತಿಕರವಾದ ವಿವರಣೆಯಿಲ್ಲ. ಯಾವುದು ಸ್ಪಷ್ಟವಾಗಿದೆ ಎಂದರೆ ಯೂದನು ತನ್ನನ್ನು ತಾನು ಯೇಸುವಿನ ಸಹೋದರನೆಂದು ಗುರುತಿಸಿಕೊಂಡಿದ್ದನು. ಸಹಜವಾಗಿ ಅವನು ಅದಕ್ಕಿಂತ ಹೆಚ್ಚಿನದನ್ನು ಹೇಳಿಕೊಳ್ಳಲು ಬಯಸಲಿಲ್ಲ. ಅವನು ತಾನು "ಯೇಸು ಕ್ರಿಸ್ತನ ದಾಸನು ಮತ್ತು ಯಾಕೋಬನ ಸಹೋದರನು" ಎಂದು ಹೇಳಿಕೊಳ್ಳುವದರಲ್ಲಿ ತೃಪ್ತನಾಗಿದ್ದನು. ಅವನು ತನ್ನನ್ನು ತಾನು ಯಾಕೋಬನೊಂದಿಗೆ ಗುರುತಿಸಿಕೊಂಡಿರುವದು ಯಾಕೋಬನು ಯೂದನಿಗಿಂತ ಯೆಹೂದಿ ಕ್ರೈಸ್ತರ ವೃತ್ತದಲ್ಲಿ ಅಧಿಕಾರಿಯಾಗಿ ಗುರುತಿಸಲ್ಪಟ್ಟಿದ್ದನ್ನು ಎಂಬುದನ್ನು ಹೆಚ್ಚು ಸ್ಪಷ್ಟವಾಗಿ ಸೂಚಿಸುತ್ತದೆ. ಆದಾಗ್ಯೂ ಅಲ್ಲಿ ಯಾಕೋಬನ ಕುರಿತಾಗಿ ಉಲ್ಲೇಖವಿಲ್ಲ ಯೂದನು ಕೇವಲ ತನ್ನ ಹೆಸರನ್ನು ಉಲ್ಲೇಖಿಸುವದರ ಮೂಲಕ ತಾನು ಗುರುತಿಸಲ್ಪಡಬೇಕು ಎಂದು ನಿರೀಕ್ಷಿಸಿದ್ದನು. ಅವನು ತನ್ನ ಓದುಗರಿಗೆ ತನಗೆ ಸೂಚನೆಗಳನ್ನು ನೀಡಲು ಮತ್ತು

ಅದನ್ನು ಇತರರು ಆಲಿಸಬೇಕು ಎಂಬ ಹಕ್ಕನ್ನು ಆತನು ಏಕೆ ಹೊಂದಿದ್ದಾನೆ ಎಂಬುದನ್ನು ತನ್ನ ಓದುಗಲಿಗೆ ವಿವರಿಸುವ ಪ್ರಯತ್ನವನ್ನು ಮಾಡಿಲ್ಲ.

ಯೂದನು ತನ್ನ ಓದುಗರನ್ನು ಸಂಬೋಧಿಸಿದ ರೀತಿ ಅಸಾಮಾನ್ಯವಾಗಿದೆ. ಅವನು ಎರಡು ಕ್ರಿಯಾಪದಗಳನ್ನು ಪರಿಪೂರ್ಣಕಾಲಗಳಲ್ಲಿ ಉಪಯೋಗಿ ಸುತ್ತಾನೆ. ಪ್ರಿಯರೇ ಇದು ವಾಸ್ತವದಲ್ಲಿ **ಪ್ರಿಯರಾದವರೂ** *(ēgapēmenois)* ಮತ್ತು **ಕಾಯಲ್ಪಟ್ಟವರೂ** *(tetērēmenois)* ಇದು ವಾಸ್ತವದಲ್ಲಿ "ಕಾಪಾಡಿಕೊಂಡವರು" ಗ್ರೀಕ್ ಭಾಷೆಯಲ್ಲಿರುವ ಪರಿಪೂರ್ಣಕಾಲವು ಅವರ ಪ್ರಸ್ತುತ ಸ್ಥಿತಿಯತ್ತ ಗಮನವನ್ನು ಸೆಳೆಯುತ್ತದೆ. ಯೂದನು ಶೋತ್ರುಗಳು **ತಂದೆಯಾದ ದೇವರಿಂದ** ಪ್ರೀತಿಸಲ್ಪಟ್ಟಿರುವ ಸ್ಥಿತಿಯಲ್ಲಿದ್ದವರು. ಅದು ಅಲ್ಲದೆ, ಅವರು **ಯೇಸು ಕ್ರಿಸ್ತನಿಗಾಗಿ** ಕಾಪಾಡಿಕೊಂಡವರು.

**ಕರೆಯಲ್ಪಟ್ಟವರು** ಯೂದನ ಶೋತ್ರುಗಳು ದೇವರೊಂದಿಗೆ ಅವರಿಗಿರುವ ಸಂಬಂಧದಲ್ಲಿ ನಿಷ್ಕ್ರೀಯರು ಎಂದು ಸೂಚಿಸುವದಿಲ್ಲ. ಅವರು ಚಟುವಟಿಕೆಯಿಂದ ಭಾಗವಹಿಸಿದಾಗ್ಯೂ ಅವರ ಸುವಾರ್ತೆಯನ್ನು ಆಲಿಸುವದು ಮತ್ತು ಅದಕ್ಕೆ ಪ್ರತಿಕ್ರಿಯಿಸುವದರಿಂದಾಗಿ ಅವರು "ಕರೆಯಲ್ಪಟ್ಟವರಾಗಿದ್ದಾರೆ." I. Howard Marshall ರವರು ಹೀಗೆ ಗಮನಿಸುತ್ತಾರೆ "(ಕರೆಯಲ್ಪಟ್ಟವರು) ಎಂಬ ಪದ" ಕ್ರೈಸ್ತರಿಗಿರುವ ವಿಶೇಷವಾದ ಗುಣಲಕ್ಷಣದ ಹೆಸರಾಗಿದೆ. ಯಾಕಂದರೆ ಅವರು ದೇವರಿಂದ ಆತನ ಜನರು ಎಂದು ಕರೆಯಿಸಿಕೊಂಡ ಮತ್ತು ಆ ಕರೆಗೆ ಪ್ರತಿಕ್ರಿಯಿಸಿದ ಜನರಾಗಿದ್ದಾರೆ (ರೋಮಾಪುರ 1:6, 7; 8:28; 1 ಕೊರಿಂಥ 1:2, 24; ಹೋಲಿಸಿ ಪ್ರಕಟನೆ 17:14).[2]

ಯೂದನು ಉಪಯೋಗಿಸಿದ ಪರಿಪೂರ್ಣಕಾಲ ಪತ್ರದ ಪ್ರಾರಂಭದ ಸೂಚನೆ ತನ್ನ ಶೋತ್ರುಗಳು ಕರ್ತನೊಂದಿಗೆ ನಿಂತುಕೊಂಡಿದ್ದಾರೆ ಎಂಬ ಸಂಪೂರ್ಣವಾದ ಭರವಸೆಯನ್ನು ಸೂಚಿಸುತ್ತದೆ. ಅವರು ತಮ್ಮ ಭರವಸೆಯನ್ನು ಹಂಚಿಕೊಳ್ಳಬೇಕು. ಅವರು ಕಾಯಲ್ಪಟ್ಟವರ ಮತ್ತು ದೇವರಿಂದ ಪ್ರೀತಿಸಲ್ಪಟ್ಟವರೂ ಆದ ಸ್ಥಿತಿಯಲ್ಲಿ ನಿಂತಿದ್ದಾರೆ. ಸಭೆಯಲ್ಲಿ ಈಗತಾನೇ ಪ್ರವೇಶಿಸಿದ ಬೋಧಕರಲ್ಲಿ ಅವರಿಗೆ ಕೊಡುವದಕ್ಕೆ ಏನೂ ಇಲ್ಲ. ಅವರಿಗೆ ಮೊದಲನೆಯದಾಗಿ ಸುವಾರ್ತೆಯನ್ನು ಹೇಳಿದ ಅಪೊಸ್ತಲರ ಸಾಕ್ಷಿಯಿಂದಾಚೆಗೆ ಅವರಲ್ಲಿ ಯಾವ ಹೇಳಿಕೆಯೂ ಇಲ್ಲ.

**ವಚನ 2.** ನಾವು ಪೌಲನ ಪತ್ರಗಳಲ್ಲಿ ಮತ್ತು ಪೇತ್ರನ ಪತ್ರಗಳಲ್ಲಿ ನೋಡುವ ಯೂದನು ಸಾಮಾನ್ಯವಾದ ವಂದನೆ "ಕೃಪೆಯನ್ನು" *(charis)* ಉಪಯೋಗಿಸಲಿಲ್ಲ. ಬದಲಾಗಿ ಆತನು ತನ್ನ ವಂದನೆಗಳನ್ನು ತನ್ನ ಸಹ ವಿಶ್ವಾಸಿಗಳಲ್ಲಿ **ಕರುಣೆ, ಶಾಂತಿ** ಮತ್ತು **ಪ್ರೀತಿ** ಹೆಚ್ಚಾಗಲಿ **ವಿಸ್ತರಿಸುತ್ತಾನೆ.** "ಹೆಚ್ಚಾಗಲಿ" *(plēthunō)* ಎಂದು ಅನುವಾದಿಸಿದ ಪದವು ಪೇತ್ರನ ಎರಡು ಪತ್ರಗಳಲ್ಲಿ ಕಾಣುವ ಪದವಾಗಿದೆ (1 ಪೇತ್ರ 1:2; 2 ಪೇತ್ರ 1:2). ಪದಗಳ ಆಯ್ಕೆ ಶೈಲಿಗೆ ಆಧ್ಯತೆಯನ್ನು ನೀಡುತ್ತದೋ ಅಥವಾ ನಾವು ಅದಕ್ಕೆ ಕೆಲವು ವಿಶಿಷ್ಟತೆಗಳನ್ನು ಸೇರಿಸಬೇಕೋ? ಪದಗಳ ಆಯ್ಕೆಯ ವಿಶಿಷ್ಟತೆ ಖಚಿತವಾಗಿಲ್ಲದೇ ಇರುವಾಗ, ನಾವು ಕನಿಷ್ಟ ಪಕ್ಷ ಇದನ್ನಾದರೂ ಹೇಳಬೇಕು. ಪತ್ರವನ್ನು ತೆರೆದಿಡುತ್ತಿರುವ  ಹಾಗೆ ಯೂದನು ಸಂಬೋಧಿಸಿದ ಸಭೆಗಳಿಗೆ ನಾವು 2 ಪೇತ್ರನ ಪತ್ರದಲ್ಲಿ ಸಂಧಿಸಿದ ಅದೆ ಸುಳ್ಳು ಬೋಧಕರು ತಂದ ಆಂತರಿಕ ತುಮುಲದಿಂದಾಗಿ ಉಂಟಾದ ಕಷ್ಟಾನುಭವವಾಗಿದೆ. ಕ್ರೈಸ್ತರಿಗೆ ಸುಳ್ಳು ಬೋಧಕರನ್ನು ನಿರ್ವಹಿಸುವದಕ್ಕಿಂತ ಹೆಚ್ಚಿನ ವೇದನೆಯನ್ನು ನೀಡುವ ಕೆಲವು ಸಂಗತಿಗಳಿವೆ. ಅದು ಸಮಾಧಾನದ ಕರ್ತನಿಗೆ ಸಮರ್ಪಿಸಿಕೊಂಡವರಿಗೆ ಮತ್ತು ಪರಸ್ಪರರನ್ನು ಗೌರವಿಸುವ ಸಮುದಾಯಕ್ಕೆ ವೇದನೆ ಮತ್ತು ತುಮುಲವನ್ನು ಉಂಟು ಮಾಡುತ್ತವೆ. ಕರುಣೆ, ಶಾಂತಿ ಮತ್ತು ಪ್ರೀತಿ ಯೂದನು ಸಂಬೋಧಿಸಿರುವ ಕ್ರೈಸ್ತರಿಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವ ಗುಣಗಳಾಗಿವೆ. ಯೂದನು ಈ ಗುಣಗಳು ಅವರಲ್ಲಿ ಹೆಚ್ಚಗಲಿ ಎಂದು ತನ್ನ ಬಯಕೆಯನ್ನು ವ್ಯಕ್ತಪಡಿಸುತ್ತಾನೆ.

## ಪತ್ರದ ಉದ್ದೇಶವನ್ನು ವ್ಯಾಖ್ಯಾನಿಸುವದು (3, 4)

**[3]ಪ್ರಿಯರೇ, ನಮಗೆ ಹುದುವಾಗಿರುವ ರಕ್ಷಣೆಯ ವಿಷಯದಲ್ಲಿ ನಿಮಗೆ ಬರೆಯುವದಕ್ಕೆ ಪೂರ್ಣಸಕ್ತಿಯಿಂದ ಪ್ರಯತ್ನಮಾಡುತ್ತಿದ್ದಾಗ ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳುಳಿವದಕ್ಕೆ ನೀವು ಹೋರಾಡಬೇಕೆಂದು ಎಚ್ಚರಿಸಿ ಬರೆಯುವದು ಅವಶ್ಯವೆಂದು ತೋಚಿತು. [4]ಯಾಕಂದರೆ ಭಕ್ತಿಹೀನರೂ ನಮ್ಮ ದೇವರ ಕೃಪೆಯನ್ನು ನೆವಮಾಡಿಕೊಂಡು ನಾಚಿಕೆಗೆಟ್ಟ ಕೃತ್ಯಗಳನ್ನು ನಡಿಸುವವರು ನಮ್ಮ ಒಬ್ಬನೇ ಒಡೆಯನೂ ಕರ್ತನೂ ಆಗಿರುವ ಕ್ರಿಸ್ತನನ್ನು ಅರಿಯದವರೂ ಆಗಿರುವ ಕೆಲವು ಜನರು ಸಭೆಯಲ್ಲಿ ಕಳ್ಳತನದಿಂದ ಹೊಕ್ಕಿದ್ದಾರೆ. ಅವರಿಗೆ ಈ ದಂಡನೆಯಾಗಬೇಕೆಂದು ಪೂರ್ವದಲ್ಲೇ ಅವರ ವಿಷಯವಾಗಿ ಬರೆದದೆ.**

**ವಚನ 3.** ತನ್ನ ಪ್ರಸ್ತಾವನೆಯ ನಂತರ ಯೂದನು ಹೆಚ್ಚು ಕಡಿಮೆ ಕ್ಷಮೆಯಾಚಿಸುವ ಸ್ಥಿತಿಗೆ ಬರುತ್ತಾನೆ. ಅವನು ಕೆಲವು ಸಮಯದಿಂದ ಅವರಿಗೆ ಬರೆಯಬೇಕೆಂದು ಯೋಚಿಸುತ್ತಿದ್ದನು ಎಂದು ತೋರುತ್ತದೆ, **ಬರೆಯುವದಕ್ಕೆ ಪೂರ್ಣಸಕ್ತಿಯಿಂದ ಪ್ರಯತ್ನ** ಮಾಡಿದ್ದಾನೆ. ಅವನ ಇಚ್ಛೆ ಅವರನ್ನು ತಾವು ಹಂಚಿಕೊಳ್ಳುವ ನಂಬಿಕೆಯಲ್ಲಿ ಬೆಳೆಸಬೇಕೆಂಬುದೇ ಆಗಿದೆ. ಯೂದನು ವಿಶಾಲವಾದ ಸಭೆಗೆ ಪತ್ರವನ್ನು ಬರೆಯಲಿಲ್ಲ. ಅವನ ಮನಸ್ಸಿನಲ್ಲಿ ಸ್ಪಷ್ಟವಾದ ಶೋತ್ರುಗಳಿದ್ದರು. ಆದಾಗ್ಯೂ, ಅವನು ಹೆಚ್ಚಿನ ಸಮಾಧಾನದ ಸಂಗತಿಗಳನ್ನು ಬರೆಯುವ ಪೂರ್ವದಲ್ಲಿ ಇತರ ಅಂಶಗಳು ಚಿತ್ರದಲ್ಲಿ ಪ್ರವೇಶಿಸಿದವು. ಅದು ತಿರುಗಿಕೊಂಡಾಗ, ಆತನು ತಮಗೆ ಪ್ರಿಯರಾಗಿದ್ದ ಕ್ರೈಸ್ತರ ನಂಬಿಕೆಗೆ ಬೆದರಿಕೆಯನ್ನು ನೀಡುವ ಸನ್ನಿವೇಶವನ್ನು ಸಂಬೋಧಿಸುವ ಅವಶ್ಯಕತೆಯನ್ನು ಕಂಡುಕೊಂಡನು.

ಒಮ್ಮೆ ಎಲ್ಲರೂ ವಂಶಪಾರಂಪರ್ಯವಾಗಿ ಕೊಂಡೊಯ್ಯದ **ನಂಬಿಕೆಯನ್ನು ಯೂದನು ಪ್ರಶಂಶಿಸಿದ್ದು ವಿಶಿಷ್ಟವಾಗಿದೆ.** ದೇವರು ತಾನೇ ತನ್ನ ಜನರಿಗೆ ಪ್ರಕಟಿಸಿದನು ಎಂಬುದರ ಕುರಿತು ವಾದಿಸುವ ಅವಶ್ಯಕತೆಯಿಲ್ಲ ಎಂಬುದು ಅವನಿಗೆ ತೋರಿಬಂತು, ಅವನು "ನಂಬಿಕೆಯನ್ನು" ಉಲ್ಲೇಖಿಸುವಾಗ ಯೂದನು ಅಪೊಸ್ತಲರ ಸಾಕ್ಷಿ ಅಪೊಸ್ತಲರ ಅಧಿಕಾರದ ಮೂಲಕ ಬಂದ ಕ್ರೈಸ್ತ ಬೋಧನೆಯನ್ನು ಅವನು ನಿಸ್ಸಂದೇಹವಾಗಿ ಉಲ್ಲೇಖಿಸಿದ್ದನು. ಅಧಿಕ ಮಹತ್ವಪೂರ್ಣವಾಗಿ, ಅದು ದೇವರು ಪ್ರಕಟಿಸಿದ್ದರಿಂದ ಬಂದ ಸತ್ಯದ ಸಭೆಯಾಗಿತ್ತು. ಯಾವುದನ್ನು ನಂಬಬೇಕು, ಹೇಗೆ ಆರಾಧಿಸಬೇಕು ತಮ್ಮ ನೆರೆಯವರನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಒಂದೇ ಮಾರ್ಗವೆಂದರೆ ಅದು ದೇವರು ಅವರೊಟ್ಟಿಗೆ ಮಾತನಾಡಿದಂತೆ. ಯೂದನು "ನಂಬಿಕೆ" ಎಂಬುದನ್ನು ಹೊಸ ಒಡಂಬಡಿಕೆಯಲ್ಲಿ ಬೇರೆಕಡೆಗೆ ಉಪಯೋಗಿಸಿರುವದಕ್ಕಿಂತ ಸ್ವಲ್ಪ ವ್ಯತ್ಯಾಸವಾಗಿ ಉಪಯೋಗಿಸುತ್ತಾನೆ Marshall ಹೀಗೆ ವೀಕ್ಷಿಸುತ್ತಾರೆ,

> ನಂಬಿಕೆ ಕಾರ್ಯರೂಪದಲ್ಲಿ ಮತ್ತು ಸಮರ್ಪಣೆಯಲ್ಲಿ ಬರುವದಕ್ಕಿಂತ ನಂಬಬೇಕಾದ ಕ್ರೈಸ್ತ ಸಂದೇಶದ ತಾತ್ಪರ್ಯಕ್ಕೆ ಒತ್ತು ನೀಡಲಾಗಿದೆ. ಆದರೆ ಸುವಾರ್ತೆಯಲ್ಲಿ ಉಪಯೋಗಿಸಿದ ನಂಬಿಕೆ ಎಂಬ ಪದ ನಂಬಿಕೆಯನ್ನು ಕಾರ್ಯರೂಪದಲ್ಲಿ ತರುವದು ಕ್ರೈಸ್ತತ್ವದಲ್ಲಿ ಅವಿಭಾಜ್ಯ ಅಂಗವಾಗಿದೆ ಎಂಬುದನ್ನು ಪ್ರದರ್ಶಿಸುತ್ತದೆ.[3]

ವಾಕ್ಯಭಾಗದಲ್ಲಿ ದೇವರ ಪ್ರಕಟಿಸುವಿಕೆ ಸೃಷ್ಟಿಕರ್ತ ಮತ್ತು ಸೃಷ್ಟಿಯ, ದೇವರು ಮತ್ತು ಆತನ ಜನರ ನಡುವೆ ಸ್ಪಷ್ಟವಾದ ಸಂಬಂಧವನ್ನು ನೀಡುತ್ತದೆ. ಯೂದನ ಮೊದಲ ಓದುಗರಿಗೆ ಹೊಸ ಒಡಂಬಡಿಕೆಗೆ ಮಾರ್ಗವಿರಲಿಲ್ಲ. ಆದಾಗ್ಯೂ, ಅವರಿಗೆ ಅಪೊಸ್ತಲರ ಮೂಲಕ ತಮಗೆ ದೊರೆತ ದೇವರು ಪ್ರಕಟಿಸಿದ ವಾಕ್ಯದ ಅರಿವಿತ್ತು. ಸ್ವಲ್ಪ ಸಮಯದ ಹಿಂದೆ ಪ್ರಕಟಿಸಿದ ವಾಕ್ಯವನ್ನು ಹೊಸ ಒಡಂಬಡಿಕೆಯ ರೂಪದಲ್ಲಿ ಬರೆದದ್ದು "ನಂಬಿಕೆಯ"

ವಿಷಯದಲ್ಲಿ ದೇವಜನರಿಗೆ ಮಾರ್ಗದರ್ಶಿಯಾಯಿತು.

John Stott ಇದನ್ನು ಉತ್ತಮವಾಗಿ ವ್ಯಕ್ತಪಡಿಸುತ್ತಾರೆ: "ನಮಗೆ ಯಾವುದೇ ಮಾತನ್ನು ಆಡುವದಕ್ಕೆ ಸ್ವತಂತ್ರವಿರುವ ಪೂರ್ವದಲ್ಲಿಯೇ ದೇವರು ನಮ್ಮೊಟ್ಟಿಗೆ ಮಾತನಾಡಬೇಕು. ನಾವು ಆತನಿಗೆ ಸ್ವಿಕರಿಸಬಹುದಾದ ಆರಾಧನೆಯಲ್ಲಿ ನಮ್ಮನ್ನು ನಾವು ಸಮರ್ಪಿಸುವದಕ್ಕಿಂತ ಪೂರ್ವದಲ್ಲಿ ಆತನು ತಾನು ಯಾರಾಗಿದ್ದಾನೆ ಎಂಬುದನ್ನು ನಮಗೆ ಪ್ರಕಟಿಸಬೇಕು. ದೇವರನ್ನು ಆರಾಧಿಸುವದು ಯಾವಾಗಲೂ ದೇವರ ವಾಕ್ಯಕ್ಕೆ ಪ್ರತಿಕ್ರಿಯೆಯಾಗಿದೆ."[4] ಯೂದನ ಶೋತ್ರುಗಳಿಗೆ ಇರುವ ಸಮಸ್ಯೆ ಎಂದರೆ ಅವರ ಮೊದಲ ಬೋಧಕರು ಮತ್ತು ನಂತರ ಬಂದವರು ತಾವು ದೇವರಿಂದ ಬಂದ ಸಂದೇಶವನ್ನು ಮಾತನಾಡುತ್ತೇವೆ ಎಂದು ಹೇಳುತ್ತಿದ್ದರು ಆದರೆ ಅಲ್ಲಿ ಎರಡು ವಿಭಿನ್ನ ಸಂದೇಶಗಳಿದ್ದವು ಯೂದನು ಅವರಿಗೆ ಅದರಲ್ಲಿ ಯಾವದು ದೇವರಿಂದ ಬಂದದ್ದು ಎಂದು ಪ್ರತ್ಯೇಕಿಸುವದಕ್ಕೆ ಸಹಾಯ ಮಾಡಿದನು.

ಸಹಜವಾಗಿ ಯೂದನು ಈ ಕ್ರೈಸ್ತರಿಗೆ ಅವರ **ಸಾಮಾನ್ಯ ರಕ್ಷಣೆಯ** ಕುರಿತಾಗಿ ಮಾತಾಡುವ ಉದ್ದೇಶವನ್ನು ಮೊದಲು ಹೊಂದಿದ್ದನು. ಆದಾಗ್ಯೂ, ಪರಿಸ್ಥಿತಿಗಳು ಪ್ರಸ್ತುತ ಪತ್ರವನ್ನು ಬರೆಯಲು ಕರೆನೀಡಿದವು ಅದು ಅವರು ನಂಬಿಕೆಗಾಗಿ ಮನಃಪೂರ್ವಕವಾಗಿ ಪ್ರಯತ್ನಿಸಬೇಕು. ಯೂದನು ಅದರ **ಅವಶ್ಯಕತೆಯನ್ನು ನಾನು ಭಾವಿಸಿದ್ದೇನೆ** ಎಂದು ಬರೆಯುತ್ತಾನೆ. *Poioumenos* ಎಂಬ ಕೃದ್ವಾಚಕಕ್ಕೆ ರಿಯಾಯಿತಿಯನ್ನು ನೀಡಿ ಓದುವಾಗ ಅನುವಾದವು "ಹುದುವಾಗಿರುವ ರಕ್ಷಣೆಯ ವಿಷಯದಲ್ಲಿ ನಿಮಗೆ ಬರೆಯುವದಕ್ಕೆ ಪೂರ್ಣಾಸಕ್ತಿಯಿಂದ ಪ್ರಯತ್ನಮಾಡುತ್ತಿದ್ದಾಗಲೂ" ಕಾರಣಕ್ಕೆ ಬದಲಾಗಿ "ನಾನು ಪೂರ್ಣಾಸಕ್ತಿಯಿಂದ ..." ಎಂದಾಗುತ್ತದೆ. ಯೂದನು ಒಂದು ರೀತಿಯ ಹಿಂಜರಿಯುವಿಕೆಯಿಂದ ಈ ಪತ್ರವನ್ನು ಅವರಿಗೆ ಬರೆದಿದ್ದಾನೆ. ಆ ಕ್ಷಣದಲ್ಲಿ ಯೂದನು ಸಂಬೋಧಿಸಿದ ಕ್ರೈಸ್ತರು ಕ್ರಿಸ್ತನನ್ನು ತೊರೆದುಬಿಡುವ ಅಪಾಯದಲ್ಲಿದ್ದರು. ಕನಿಷ್ಟ ಅವರಲ್ಲಿ ಕೆಲವರು ಸುಳ್ಳು ಬೋಧಕರಿಂದ ಮೋಸಹೋಗಿದ್ದರು. ಅವರು ನಂಬಿಕೆಯಲ್ಲಿ ನೆಲೆಗೊಳ್ಳುವವರೆಗೆ ಕ್ರೈಸ್ತ ಕೃಪೆಯಲ್ಲಿ ಬೆಳೆಯುವ ಸ್ಥಿತಿಯಲ್ಲಿ ಇರಲಿಲ್ಲ. ಯೂದನು ಅವರ ಹುದುವಾದ ರಕ್ಷಣೆಯ ವಿಷಯದಲ್ಲಿ ಪ್ರೋತ್ಸಾಹಿಸುವ ಪದಗಳಿಂದ ಯಾವ ವಿಧದ ಪತ್ರವನ್ನು ಬರೆದಿರಬಹುದು ಎಂಬುದರ ಕುರಿತು ನಾವು ಕೇವಲ ಕಲ್ಪನೆಯನ್ನು ಮಾಡಿಕೊಳ್ಳಬಹುದು.

ಇತರ ಸಂಗತಿಗಳಲ್ಲಿ "ನಂಬಿಕೆಯು" ಪ್ರೇರೇಪಣೆಯನ್ನು ಹೊಂದಿದ ಮನುಷ್ಯರ ಮೂಲಕ ಬಂದ ಕ್ರೈಸ್ತ ಸಭೆಯ ಬೋಧನೆಗಳಿಗೆ ಉಪಯೋಗಿಸಲಾಗಿದೆ. ಪೌಲನು ಈ ಪದವನ್ನು ಸಾಮಾನ್ಯವಾಗಿ ಭರವಸೆಗೆ ಉಪಯೋಗಿಸುತ್ತಾನೆ, ಆದರೆ ಕೆಲವು ಸನ್ನಿವೇಶಗಳಲ್ಲಿ ಆತನು "ನಂಬಿಕೆಯ" ಕುರಿತಾಗಿ ಬರೆಯುತ್ತಾನೆ. ಪೌಲನಿಗೆ, ಸಹ ಇದು ಕ್ರೈಸ್ತ ನಂಬಿಕೆ ಮತ್ತು ಅಭ್ಯಾಸದ ಸಾರಾಂಶವಾಗಿದೆ (ಗಲಾತ್ಯ 1:23; 1 ತಿಮೊಥೆ 1:2; 3:9; 4:1, 6; 5:8; 6:10, 21; 2 ತಿಮೊಥೆ 3:8; 4:7; ತೀತ 1:13). ಕ್ರೈಸ್ತ ಸಭೆಯ ಧಾರ್ಮಿಕ ಅಭಿಪ್ರಾಯಗಳು ಪಾಪ ನಿವೇಧನೆ ಮತ್ತು ಸಭೆಯ ಆಚಾರಗಳು ಯೂದನ ಶೋತ್ರುಗಳಿಗೆ ಅಪೊಸ್ತಲ ಬೋಝುಕರಿಂದ ಕೊಡಲ್ಪಟ್ಟಿದ್ದವು. ಯೂದನು ಬರಲಿಕ್ಕಿರುವ ಸಂಗತಿಗಳಿಗೆ ಅಸ್ತಿವಾರವನ್ನು ಹಾಕುತ್ತಿದ್ದಾನೆ. ಅವನು ತಮಗೆ ದೊರೆತ "ನಂಬಿಕೆ" ಕನಿಷ್ಟಪಕ್ಷ ಭಾಗಶಃ ಪ್ರಸ್ತಾಪಿಸಿದ ಸತ್ಯಗಳು ಮತ್ತು ನೈತಿಕವಾಗಿ ಅತ್ಯಗತ್ಯವಾದವುಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಿಲ್ಲ.

ಕ್ರಿಡಾ ಸ್ಪರ್ದೆಯಿಂದ ತೆಗೆದುಕೊಂಡ ಉಪಯೋಗಿಸಿದ ಭಾಷಾಲಂಕಾರವು, ಯಾಕೋಬನ ಸಹೋದರನು, ತಾವು ಹೊಂದಿಕೊಂಡ "ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನೀವು ಹೋರಾಡಬೇಕು" ಎಂದು ತನ್ನ ಶೋತ್ರುಗಳನ್ನು ಬೇಡಿಕೊಳ್ಳುತ್ತಿದ್ದಾನೆ. ಪತ್ರವು ವಿವರಿಸುತ್ತಿರುವ ಹಾಗೆ, ಕೆಳಗಿನ ಪ್ಯಾರಾಗಳಲ್ಲಿ ವಿವರಿಸಿದ ಬೋಧಕರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವರು ಅನುಮತಿಸಬಾರದು ಎಂದು

ಆತನು ಹೇಳುತ್ತಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಅವರು ಹೊಂದಿಕೊಂಡ ಅಪೊಸ್ತಲರ ಬೋಧನೆ ಪರಿಪೂರ್ಣವಾಗಿದೆ. ಅವರನ್ನು ಪರಿಪೂರ್ಣವಾಗಿ ನಡೆಸಲು ಸಮರ್ಥವಾಗಿದೆ. ಅಷ್ಟೊಂದು ಅಹ್ಲಾದಕರವಾಗಿಲ್ಲವಾದರೂ, ಕ್ರೈಸ್ತರು ಸತ್ಯಕ್ಕಾಗಿ ನಿಂತುಕೊಳ್ಳುವ ಸಮಯವು ಬರುತ್ತದೆ ಅದು ಕ್ರೈಸ್ತರು ಎಂದು ಹೇಳಿಕೊಳ್ಳುವ ಸಹೋದರ ಸಹೋದರಿಯರಿಗೆ ತೀರ್ವವಾದ ಹೋರಾಟವಾಗಿರಬಹುದು.

**ವಚನ 4.** ಯಾರು "ನಂಬಿಕೆಯೊಂದಿಗೆ" ಹೊಂದಾಣಿಕೆ ಮಾಡಿಕೊಳ್ಳುತ್ತಾರೋ ಅವರು ಸಹಜವಾಗಿ ತಮ್ಮ ಕ್ರಿಸ್ತೀಯ ಭರವಸೆಯೊಂದಿಗೆ ಮೋಸಕರವಾದ ಮತ್ತು ರಹಸ್ಯಮಯವಾದ ಮಾರ್ಗದಲ್ಲಿ ಕಾರ್ಯಮಾಡುತ್ತಾರೆ. ಅವರು ಕಳ್ಳತನದಿಂದ ಹೊಕ್ಕಿದ್ದಾರೆ. ಬಹುಶಃ ಅವರು ಸಂಚಾರಿ ಬೋಧಕರು/ಪ್ರವಾದಿಗಳು ಆಗಿದ್ದಾರೆ ಆದರೆ ಅವರು ಪರಿವರ್ತನೆ ಹೊಂದುವದಕ್ಕೆ ಪೂರ್ವದಲ್ಲಿ ಪ್ರಾರ್ಥನಾ ಮಂದಿರದಲ್ಲಿ ದೀರ್ಘ ಇತಿಹಾಸವನ್ನು ಹೊಂದಿದವರಾಗಿರಬಹುದು. ಆದಿ ಕ್ರೈಸ್ತ ಪ್ರಾರ್ಥನಾ ಮಂದಿರಗಳಲ್ಲಿ ಯಾರು ಅತ್ಯಂತ ಹೆಚ್ಚಾಗಿ ಪ್ರಸ್ತುತ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಯಾವುದೇ ಗೊತ್ತು ಗುರಿಯಿಲ್ಲದ ಗ್ರೀಕ್ ಸಂಸ್ಕೃತಿಯ ಲೋಕದಲ್ಲಿ ಹೆಚ್ಚು ಮೆಚ್ಚುಗೆಗೆ ಪಾತ್ರರಾಗಿರುತ್ತಾರೋ ಅವರು ಒಲವನ್ನು ತೋರಿಸಿದರು. ಕ್ರೈಸ್ತ ಬೋಧಕರು ಬಂದಾಗ, ಇಂಥಹ ಜನರು ಅವರ ಸಂದೇಶಗಳನ್ನು ಅಪ್ಪಿಕೊಳ್ಳುವದರಲ್ಲಿ ಮೊದಲಿಗರಾ ಗಿದ್ದರು.

ಗ್ರೀಕ್ ಸಂಸ್ಕೃತಿಯೆಡೆಗೆ ಹೆಚ್ಚು ಒಲವಿದ್ದ ಯೆಹೂದ್ಯರು ಕ್ರೈಸ್ತ ಸ್ವಾತಂತ್ರ್ಯವನ್ನು ಅದು ನೈತಿಕ ಸ್ವಾತಂತ್ರ್ಯವಾಗುವ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಸಿದ್ಧರಾಗಿರುತ್ತಿದ್ದರು. ಅವರಿಗಾಗಿ ಯೂದನಿಗೆ ಸಮಯವಿರಲಿಲ್ಲ. ಸುಳ್ಳು ಬೋಧಕರ ವಿಷಯದಲ್ಲಿ ಅವರಿಗೆ ದಂಡನೆಯಾಗಬೇಕೆಂದು ಪೂರ್ವದಲ್ಲೇ ಅವರ ವಿಷಯವಾಗಿ ಬರೆದದೆ. ಅವನ ಹೇಳಿಕೆ ಸಾರ್ವಜನಿಕವಾಗಿದೆ. ಯೂದನು ನಿರ್ದಿಷ್ಟವಾಗಿ ಈ ಬೋಧಕರು **ಹಿಂದಿನಿಂದಲೂ ಪ್ರವಾದನೆಯ ವಿಷಯದಲ್ಲಿ ವೈಯಕ್ತಿಕವಾಗಿದ್ದರು ಎಂದು ಸೂಚಿಸುವದಿಲ್ಲ.** ಅವರು ದೇವರಿಗೆ ಅಗೌರವ ತೋರಿಸುವದರಲ್ಲಿ ಲೋಕದ ಅಸ್ತಿವಾರಕ್ಕೆ ಪೂರ್ವದಲ್ಲಿ ನೇಮಿಸಲ್ಪಟ್ಟಿದ್ದರು ಎಂಬುದನ್ನು ಕುರಿತು ಆತನು ಹೆಚ್ಚಾಗಿ ಹೇಳುವದಿಲ್ಲ. ಬದಲಾಗಿ, ಯೂದನು ಸುಳ್ಳುಬೋಧ ಕರು ದೇವರ ರಚನೆಯನ್ನು ನಿಷ್ಫಲಗೊಳಿಸುವವರಾಗಿರಲಿಲ್ಲ ಎಂದು ದೃಢಪಡಿಸುತ್ತಾನೆ. ಅವನು ಅವರೊಂದಿಗೆ ವ್ಯವಹರಿಸುತ್ತಾನೆ. ಸುಳ್ಳುಬೋಧಕರು ಹಿಂದೆ ದೇವರ ಜನರ ಮಧ್ಯದಲ್ಲಿ ಉದ್ಭವಿಸಿದ್ದರು. ಆತನು ಯಾವಾಗಲೂ ಮಾಡಿದಂತೆ ದೇವರು ಅವರು ನಾಶವಾ ಗುವಂತೆ ನೋಡಿಕೊಳ್ಳುತ್ತಾನೆ.

2 ಪೇತ್ರನ ಪತ್ರಿಕೆಯಲ್ಲಿ ಸುಳ್ಳು ಬೋಧಕರು ಕೆಳಗಿನವುಗಳನ್ನು ಹೊಂದಿಕೊಳ್ಳಲು ಮಾನವನ ಇಂದ್ರಿಯಾಸಕ್ತಿಯೆಡೆಗೆ ಅರಿಕೆಮಾಡುತ್ತಾರೆ. 2 ಪೇತ್ರ 2:1-3ರಲ್ಲಿರುವ ಸಮಾನಾಂತರವನ್ನು ನೋಡಿರಿ: (1) ಅವರು ಒಬ್ಬನೇ ಒಡೆಯನು ಮತ್ತು ಕರ್ತನನ್ನು ಅಲ್ಲಗಳೆದರು; (2) ಅವರು ವಿಷಯಲಂಪಟತೆಯನ್ನು ಆಚರಿಸಿದರು; (3) ಅವರ ನಾಶನವು ಹಿಂದಿನಿಂದ ಬಂದದ್ದು; (4) ಮತ್ತು ಅವರು ಮೋಸದ ಮೂಲಕ ಬಂದವರು.

ಯೇಸು "ಭಕ್ತಿಹೀನ ವ್ಯಕ್ತಿಗಳ" ಎರಡು ಗುಣಲಕ್ಷಣಗಳ ಮೇಲೆ ಕೇಂದ್ರಿಕರಿಸುತ್ತಾನೆ. ಮೊದಲನೆಯದಾಗಿ ಅವರು ನಮ್ಮ ದೇವರ ಕೃಪೆಯನ್ನು ವಿಷಯಲಂಪಟತೆಯತ್ತ ತಿರುಗಿಸುತ್ತಾರೆ. ಇದರೊಟ್ಟಿಗೆ ಆತನು ಹೇಳುತ್ತಾನೆ, **ಅವರು ನಮ್ಮ ಒಬ್ಬನೇ ಒಡೆಯನು ಮತ್ತು ಕರ್ತನಾದ ಯೇಸು ಕ್ರಿಸ್ತನನ್ನು ಅಲ್ಲಗಳೆಯುತ್ತಾರೆ.** ಸಹಜವಾಗಿ, ಈ ಬೋಧಕರು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ ಅಥವಾ ಬೋಧನೆ ಮತ್ತು ನಡತೆಯನ್ನು ಸ್ವಲ್ಪವೂ ಸಂಶಯಪಡದೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂಬುದರ ಕುರಿತು ಕ್ರೈಸ್ತರು ಅರಿಕೆ ಮಾಡುವದು ಅವಶ್ಯವಾಗಿದೆ ಎಂದು ಹೇಳುತ್ತಾನೆ. ಯಾಕೋಬನು ಸಹೋದರನು ಅವರು ಅಲ್ಲಗಳೆದಿರುವ ರೀತಿಯನ್ನು ಸವಿಸ್ತಾರವಾಗಿ ಹೇಳುವದಿಲ್ಲ. ಇಷ್ಟನ್ನು ಮಾತ್ರ ಆತನು

ಸ್ಪಷ್ಟಪಡಿಸುತ್ತಾನೆ. ಕ್ರೈಸ್ತರ ಅರಿಕೆಯ ಪ್ರಾರಂಭದ ಹಂತವೆಂದರೆ ಯೇಸುವು "ಒಡೆಯನು ಮತ್ತು ಕರ್ತನು" ಆಗಿದ್ದಾನೆ ಎಂಬುದೇ. ವೈಯಕ್ತಿಕ ವಿಶ್ವಾಸಿಗೆ ಮತ್ತು ಸಭೆಗೆ ನಜರೇತಿನ ಯೇಸುವಿಗಿಂತ ಸಂಬಂಧಿಸಿರುವದಕ್ಕಿಂತ ಹೆಚ್ಚಾಗಿ ಜನರಿಗೆ ಹೆಚ್ಚಿನ ಅಧಿಕಾರವಿರುವದಿಲ್ಲ, ಹೆಚ್ಚಿನ ನಿಷ್ಟೆ. ಹೆಚ್ಚಿನ ವಿಧೇಯತೆ ಇರುವದಿಲ್ಲ.

"ಕ್ರಿಸ್ತನನ್ನು ಕರ್ತನು" ಎಂದು ಕರೆಯಲು ಎರಡು ಮೂಲಕಾರಣಗಳಿವೆ. ಅದು ಪಾಪನಿವೇದನೆಯನ್ನು ಸೂಚಿಸುತ್ತದೆ, ಕ್ರಿಸ್ತನು ಯಾರಾಗಿದ್ದಾನೆ ಎಂಬುದರ ನಂಬಿಕೆಯ ಅರಿಕೆಯನ್ನು ಒಳಗೊಂಡಿದೆ. ಆದರೆ ಕ್ರಿಸ್ತನನ್ನು "ಒಡೆಯನು" ಎಂದು ಕರೆಯುವದು ಬಲವಾದ ಸಮರ್ಪಣೆಯನ್ನು ಸೂಚಿಸುತ್ತದೆ. ಸುಳ್ಳು ಬೋಧಕರ ಕಲೆಗಳು, ವಿಷಯಲಂಪಟತೆಯ ಜೀವಿತವನ್ನು ಮತ್ತು ಯೇಸುವಿನ ಒಡೆತನವನ್ನು ಅಲ್ಲಗಳೆಯುವದನ್ನು ಸೂಚಿಸುತ್ತವೆ. ಅವರು ಕ್ರಿಸ್ತೀಯ ನಂಬಿಕೆಯ ಮೂಲ ಅರಿಕೆಯನ್ನು ಮತ್ತು ಅದು ಕೇಳುವ ಜೀವನ ಶೈಲಿಯನ್ನು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಒಂದು ವೇಳೆ ಯೂದನು ಹೊಂದಾಣಿಕೆ ಮಾಡಿಕೊಳ್ಳಲಾರದ ಭಯಂಕರವಾದ ಪದಗಳ ಗುಂಡಿನ ಮಳೆಯನ್ನು ಅವರ ವಿರುದ್ಧವಾಗಿ ಸುರಿಸಿದ್ದರೆ ಅದು ಅವರು ಯೇಸುವಿನ ನಾಮವನ್ನು ಹೊಲೆ ಮಾಡಿದ ಅಪರಾಧದ ಅಳತೆಗೆ ಅನುಸಾರವಾಗಿ ಇದೆ.

## ಅಳವಡಿಸುವದು

**ನಂಬಿಕೆಗಾಗಿ ಪ್ರಯಾಸಪಡಿರಿ (ವಚನಗಳು 3, 4)**

ಪ್ರತಿಯೊಬ್ಬ ಕ್ರೈಸ್ತನು ವಿಶ್ವಾಸಿಯ ದೇಹದಲ್ಲಿ ಉದ್ಭವಿಸುವ ಮನಸ್ತಾಪ, ಭಿನ್ನಾಭಿಪ್ರಾಯ ಮತ್ತು ಎಲ್ಲಾ ಸಮಯವನ್ನು ಶಕ್ತಿಯನ್ನು ಕ್ರಿಸ್ತನ ಸೇವೆಗೆ ಸಮರ್ಪಿಸುವ ಉಪದೇಶಕರ ಮತ್ತು ಬೋಧಕರ ವಿಷಯದಲ್ಲಿ ಸತ್ಯವಾಗಿದೆ. ಇಂತಹ ಸಮಸ್ಯೆಗಳೊಂದಿಗೆ ವ್ಯವಹರಿಸುವದರಲ್ಲಿ ಅತಿರೇಕಗಳಿವೆ. ಕೆಲವು ಜಿಗುಪ್ಸೆಯನ್ನು ತರುವ ಪ್ರಶ್ನೆಗಳಿಂದಾಗಿ, ನಿಷ್ಪ್ರಯೋಜಕವಾಗಿವೆ, ಸಭೆಯಲ್ಲಿ ಭಿನ್ನಾಭಿಪ್ರಾಯ ಮತ್ತು ಗಲಬೆಯನ್ನು ಹುಟ್ಟಿಸುತ್ತವೆ ಮತ್ತು "ಸಹೋದರತ್ವದ ವಿಷಯದೊಂದಿಗೆ" ಗುರುತಿಸಬಹುದಾದ ತಿರಸ್ಕಾರದೊಂದಿಗೆ ಮಾತನಾಡಲು ಮುಂದೆ ಬರುತ್ತವೆ. ಇತರರಿಗೆ ಸ್ವಲ್ಪ ಸಮಯ ಮತ್ತು ಶಕ್ತಿಯಿರುತ್ತದೆ ಮತ್ತು ಅವರು ಉತ್ತಮವಾದ ವಾದವಿವಾದವನ್ನು ಆಲಿಸಲು ಸಾವಿರಾರು ಮೈಲುಗಳ ಪ್ರಯಾಣವನ್ನು ಬೆಳೆಸುತ್ತಾರೆ. ಯೂದನ ಪತ್ರವು ನಮ್ಮನ್ನು ಸಮಾನಾಂತರದ ಮಾರ್ಗದೆಡೆಗೆ ನಿರ್ದೇಶಿಸುತ್ತದೆ.

ನಮ್ಮಂತೆ ಇರುವ ಅನೇಕರಿಗೆ, ಯಾಕೋಬನ ಸಹೋದರನು ತಾನು ಆನಂದಿಸಿದ ಸಾರ್ವಜನಿಕವಾದ ರಕ್ಷಣೆ ಸಂದೇಶವನ್ನು ತನ್ನ ಶೋತೃಗಳೊಂದಿಗೆ ಹಂಚಿಕೊಳ್ಳಲು ಬಯಸುತ್ತಾನೆ. ಒಂದು ಮಾಡುವ ಶ್ರೇಷ್ಟವಾದ ಕ್ರೈಸ್ತತ್ವದ ಕಲ್ಪನೆಯನ್ನು ಆನಂದಪಡಿಸಲು ಮತ್ತು ನಂಬಿಕೆಯನ್ನು ಬೆಳೆಸುವದಕ್ಕೆ ಮಾತಾಡುತ್ತಾನೆ ಮತ್ತು ಬರೆಯುತ್ತಾನೆ. ಆತನು ಶ್ರೇಷ್ಟ ವಿಷಯಗಳಾದ ಪ್ರೀತಿ, ವಿಮೋಚನೆ ಮತ್ತು ರಕ್ಷಣೆಯ ವಿಷಯಗಳ ಮೇಲೆ ಚಿಂತನೆ ಮಾಡದೇ ಇರುವಾಗ ಯಾರಾದರೂ ಏಕೆ ಸುಳ್ಳು ಬೋಧಕರೊಂದಿಗೆ ಕ್ಷುಲ್ಲಕ ವಿಚಾರದಲ್ಲಿ ಜಗಳವಾಡಬೇಕು? ಯೂದನಿಗೆ ಅದು ಅವಶ್ಯಕತೆಯ ವಿಷಯವಾಗಿತ್ತು. ಆತನು ಕ್ರಿಸ್ತನ ವಿಷಯ ಹೊಂದಾಣಿಕೆಯಾಗಿದೆ ಮತ್ತು ತನ್ನ ಶೋತೃಗಳು ತಾವು ಆನಂದಿಸಿದ ಸಾರ್ವಜನಿಕವಾದ ರಕ್ಷಣೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ ಎಂಬುದನ್ನು ತಿಳಿದುಕೊಂಡಿದ್ದನು.

ಇದು ಸಂತೋಷವನ್ನು ಉಂಟು ಮಾಡುವಂತದ್ದಾಗಿಲ್ಲದಿದ್ದರೂ, ನಂಬಿಕೆಗಾಗಿ ಪೇರಯಾಸಪಡುವ ಸಮಯಗಳಿದ್ದವು. ಯೂದನು ನಮ್ಮ ಮುಂದೆ ಇಟ್ಟಿರುವ ಪತ್ರಿಕೆಯಲ್ಲಿ ತೀರ್ವವಾಗಿ ಪ್ರಯತ್ನಿಸುತ್ತಾನೆ ಮತ್ತು ಆತನು ತನ್ನ ಓದುಗರಿಗೆ ಹಾಗೆ ಮಾಡುವಂತೆ ಬೇಡಿಕೊಳ್ಳುತ್ತಾನೆ. ಇವು ವೈಯಕ್ತಿಕ ಅಭಿಪ್ರಾಯವನ್ನು ಹೊರತುಪಡಿಸಿ ಬೇರೆನನ್ನೂ ಹೇಳುವ

ಪಾಖಂಡ ಬೋಧನೆಗಳಲ್ಲ. ಯೂದನು ಎದುರಿಸಿದ ಬೋಧಕರ ಸಂದೇಶ, ಒಂದು ವೇಳೆ ಅನುಸರಿಸಿದ್ದೇ ಆದರೆ, ಕ್ರೈಸ್ತ ಧರ್ಮದ ಮೂಲ ಸ್ವರೂಪವನ್ನೇ ಬದಲಾಯಿಸುವಂತದ್ದಾಗಿತ್ತು.

**ಉದಾತ್ತವಾದ (ವಚನಗಳು 3, 4)**

ಹೊಸ ಒಡಂಬಡಿಕೆಯ ಫರಿಸಾಯರು ಭಕ್ತಿಯ ಜೀವಿತವನ್ನು ಕೆಲವು ನಿಯಮಗಳಿಗೆ ಸೀಮಿತಗೊಳಿಸುವ ಪ್ರವೃತ್ತಿಯನ್ನು ಹೊಂದಿದ್ದರು. ಅವರು ಮೇಲಿಂದ ಮೇಲೆ ಯೇಸುವಿನ ವಿರೋಧಿಗಳಾಗಿದ್ದರು. ಕರ್ತನು ಅವರ ನಿಯಮಗಳಿಗೆ ಅಷ್ಟಾಗಿ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಫರಿಸಾಯರನ್ನು ಅನೇಕಾವರ್ತಿ "ಉದಾತ್ತವಾದಿಗಳು" ಎಂದು ಹೆಸರಿಸಲಾಗುತ್ತಿತ್ತು. ವ್ಯಾಖ್ಯಾನಗಳು ಪ್ರಾಮುಖ್ಯವಾಗಿವೆ. ಉದಾತ್ತವಾದಿಯು ದೇವರು ಆಜ್ಞಾಪಿಸಿದ್ದನ್ನು ಮಾಡುವದರಲ್ಲಿ ಎಚ್ಚರವಹಿಸುವ ವ್ಯಕ್ತಿಯಲ್ಲ. ಅವನು ಸಭೆಯ ಜೀವಿತದಲ್ಲಿ ಅಥವಾ ತನ್ನ ಸ್ವಂತ ನೈತಿಕ ಜೀವಿತದಲ್ಲಿ ಬರುವ ಪ್ರತಿಯೊಂದು ಪ್ರಶ್ನೆಗೆ ಸಡಲಿಸಲಾರದು ನಿಯಮಗಳನ್ನು ಬಯಸುವ ವ್ಯಕ್ತಿಯಾಗಿರುತ್ತಾನೆ. ಎಲ್ಲವನ್ನೂ ಒಳಗೊಂಡಂತ ನಿಯಮಗಳಿಲ್ಲದಿದ್ದಲ್ಲಿ, ಅವನು ಕೆಲವನ್ನು ಬರೆಯುತ್ತಾನೆ. ಅವರನ್ನು ದೇವರು ಇರುವದಕ್ಕಿಂತ ಹೆಚ್ಚು ಕಟ್ಟುನಿಟ್ಟಾಗಿರುತ್ತಾನೆ.

ಕ್ರೈಸ್ತರು ತಮ್ಮ ಸತ್ಯವೇದವನ್ನು ತೆರೆದಿಟ್ಟುಕೊಂಡು ಅವುಗಳ ಮಧ್ಯದಲ್ಲಿ ಸಮಾನತೆಯನ್ನು ನಿರ್ವಹಿಸಬೇಕು. (1) ವಿಶ್ವಾಸಿಗಳ ದೃಷ್ಟಿಕೋನದ ಮಧ್ಯದಲ್ಲಿರುವ ವ್ಯತ್ಯಾಸವನ್ನು ಚರ್ಚಿಸುವ ಅವಕಾಶವನ್ನು ಅನುಮತಿಸಬೇಕು. (2) ಸತ್ಯವೇದದ ಬೋಧನೆಗಳಿಗೆ ಬದ್ಧರಾಗಿರಲು ಆಗ್ರಹಪಡಿಸಬೇಕು. ಉದಾತ್ತವಾದವು ನಿಜವಾದ ಶೋಧನೆಯಾಗಿದೆ ಎಂಬುದನ್ನು ನಾವು ಗುರುತಿಸಬೇಕು. ಇದು ಸಭೆಯು ಎದುರಿಸುವ ನಿಜವಾದ ಅಪಾಯವಾಗಿದೆ ಆದರೆ ನಾವು "ಉದಾತ್ತವಾದವನ್ನು" ನಮ್ಮೊಂದಿಗೆ ಅಸಮ್ಮತಿಯನ್ನು ವ್ಯಕ್ತಪಡಿಸುವ ಯಾರನ್ನಾದರೂ ಗುರುತಿಸಲು ಹೇಗೆ ಉಪಯೋಗಿಸುತ್ತೇವೆ ಎಂಬುದರ ಕುರಿತು ಎಚ್ಚರವಾಗಿರಬೇಕು. ಒಬ್ಬ ವ್ಯಕ್ತಿಯು ಉದಾತ್ತವಾದಿಯಾಗಿರಲಿಕ್ಕಿಲ್ಲ, ಉದಾಹರಣೆಗೆ, ಆತನು ಕರ್ತನ ಭೋಜನವನ್ನು ಪ್ರತಿಯೊಂದು ಕರ್ತನದಿನದಲ್ಲಿ ಆಚರಿಸಬೇಕು ಎಂದು ನಂಬುತ್ತಾನೆ. ಸತ್ಯವೇದವು ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಹಂಚುವದಕ್ಕೆ ಒಂದೇ ಪಾತ್ರೆಯನ್ನು ಉಪಯೋಗಿಸಬೇಕು ಎಂದು ಸತ್ಯವೇದವು ಬೋಧಿಸುತ್ತದೆ ಎಂದು ನಂಬುವ ಜನಸಮೂಹವನ್ನು ನಾನು ಸಂಧಿಸಿದ್ದೇನೆ. ಅದನ್ನು ನಂಬುವದರಿಂದ ಅವರು ಉದಾತ್ತವಾದಿಗಳಾಗಿರಬೇಕಾದ ಅವಶ್ಯಕತೆಯೇನಿಲ್ಲ. ಒಬ್ಬ ವ್ಯಕ್ತಿ ಉದಾತ್ತವಾದಿಯಾಗಿರದೇ ತಪ್ಪಾದ ವ್ಯಕ್ತಿಯಾಗಿರಬಹುದು.

ಇದು "ಉದಾತ್ತರವಾದವನ್ನು" ಉದಾಹಸೀನತೆಯಿಂದ ಉಪಯೋಗಿಸುವ ಇನ್ನೊಂದು ಪದವಾಗಿದೆ. ಕ್ರೈಸ್ತರು ಯಾರಾದನ್ನು ಅಥವಾ ಯಾವುದಾದನ್ನೂ "ಉದಾತ್ತತೆ" ಎಂದು ಹೆಸರಿಸುವದನ್ನು ನಾನು ಆಲಿಸಿದ್ದೇನೆ, ಆದರೆ ಅನೇಕಾವರ್ತಿ ಆ ವ್ಯಕ್ತಿ ಯಾವುದರ ಕುರಿತಾಗಿ ಮಾತನಾಡುತ್ತಿದ್ದಾನೆ ಎಂಬುದರ ಕುರಿತು ಖಚಿತನಾಗಿಲ್ಲ. ಒಂದು ವೇಳೆ "ಉದಾತ್ತವಾದ" ಸತ್ಯವೇದದ ಬೋಧನೆಗಳನ್ನು ಸಭೆಯು ಲೋಕಕ್ಕೆ ಸ್ಥಳವನ್ನು ನೀಡಿ ಹೊಂದಾಣಿಕೆಮಾಡಿಕೊಳ್ಳುವ ಪ್ರವೃತ್ತಿಯಾಗಿದ್ದಲ್ಲಿ, ಅವದು ತಪ್ಪು. ಅದು ದೇವರು ತನ್ನ ಸಭೆ ಏನು ಮಾಡಬೇಕೆಂದು ಮತ್ತು ಹೇಗಿರಬೇಕೆಂದು ಬಯಸುತ್ತಾನೆ ಎನ್ನುವದಕ್ಕಿಂತ ಹೆಚ್ಚಾಗಿ ಜನರು ಏನು ಯೋಚಿಸುತ್ತಾರೆ ಎನ್ನುವದರಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿರುವ ಮನಸ್ಸಿನ ಚೌಕಟ್ಟನ್ನು ಉಲ್ಲೇಖಿಸುತ್ತದೆ. ಉದಾತ್ತವಾದವು ದೇವರ ವಾಕ್ಯದ ಮೌಲ್ಯಗಳಿಗೆ ಮತ್ತು ಅದರ ಮಾರ್ಗದರ್ಶನಕ್ಕೆ ಕಡಿಮೆ ಗೌರವವನ್ನು ನೀಡುತ್ತದೆ.

ನಾವು ಉದಾತ್ತವಾದದ ವಿಷಯದ ಅಧ್ಯಯನಕ್ಕಾಗಿ ವಾಕ್ಯಭಾಗವನ್ನು ನೋಡುವಾಗ, ಅದನ್ನು ಕಂಡುಕೊಳ್ಳುವದು ಕಠಿಣವಾಗುವದಿಲ್ಲ. ಹೊಸ ಒಡಂಬಡಿಕೆಯ ಫರಿಸಾಯರು ಇಂಥಹ ಆತ್ಮೀಕ ಕಾಯಿಲೆಗೆ ಉದಾಹರಣೆಯಾಗಿದ್ದಾರೆ. ವಿಷಯ ಅಧ್ಯಯನಕ್ಕಾಗಿ ವಾಕ್ಯಭಾಗವನ್ನು ನೋಡುವಾಗ ಸ್ವಲ್ಪ ಕಠಿಣವಾಗಿ ತೋರಬಹುದು. ನಾವು ಅವುಗಳನ್ನು

ಎಲ್ಲಿ ಹುಡುಕಬೇಕು? ಹೊಸ ಒಡಂಬಡಿಕೆಯಲ್ಲಿ ಉದಾತ್ತವಾದ ಎಂದು ಕರೆಯಲ್ಪಡುವ ಆತ್ಮೀಕ ಕಾಯಿಲೆಯನ್ನು ಪ್ರದರ್ಶಿಸುವ ಸುಳ್ಳು ಬೋಧಕರು ಯಾರು? ಈ ಸುಳ್ಳು ಬೋಧಕರ ವರ್ಣನೆಯನ್ನು ನೀಡುವ ಯೂದನ ಪುಸ್ತಕಕ್ಕಿಂತ ನನಗೆ ತಿಳಿದಿರುವ ಉತ್ತಮವಾದ ಪುಸ್ತಕ ಇನ್ನೊಂದಿಲ್ಲ.

(1) *ಯೂದನು ಎದುರಿಸಿದ ಬೋಧಕರು ಹೊಸ ಒಡಂಬಡಿಕೆಯ ನೈತಿಕತೆ, ದೈವಿಕತೆ ಮತ್ತು ವೈಯಕ್ತಿಕ ಪ್ರಾಮಾಣಿಕತೆಯ ಬೋಧನೆಗಳಿಗೆ ಅಗೌರವವನ್ನು ತೋರಿಸುತ್ತಿದ್ದರು ಮತ್ತು ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು.* ಯೂದನು "ದೇವರ ಕೃಪೆಯನ್ನು ನೆವಮಾಡಿಕೊಂಡು ನಾಚಿಕೆಗೆಟ್ಟು ಕೃತ್ಯಗಳನ್ನು ನಡಿಸುವ ಭಕ್ತಿಹೀನ ಜನರ" ಕುರಿತಾಗಿ ಬರೆಯುತ್ತಾನೆ (ವಚನ 4). ಆತನು, "ತಮ್ಮ ಆಶೆಗಳನ್ನು ಅನುಸರಿಸಿ ನಡೆಯುವ ಕುಚೋದ್ಯಗಾರರು ಅಂತ್ಯಕಾಲದಲ್ಲಿ ಇರುತ್ತಾರೆ" ಎಂದು ಹೇಳುತ್ತಾನೆ (ವಚನ 18).

ಗ್ರೀಕೋ ರೋಮನ್ ಲೋಕವು ಆಧುನಿಕ ಲೋಕದಷ್ಟೇ ಅನೈತಿಕವಾಗಿದೆ. ದರೋಡೆ, ಕೊಲೆ ವಿಚ್ಛೇದನ, ಸೂಳೆಗಾರಿಕೆ, ಗರ್ಭಪಾತ, ಸಲಿಂಗರತಿ, ಎಲ್ಲಾ ರೀತಿಯ ಲೈಂಗಿಕ ದುರ್ಮಾಗಗಳು ಇವೆ - ನಾವು ಅವುಗಳನ್ನು ಸಂಶೋಧಿಸಿಲ್ಲ. ಈ ರೀತಿಯ ವರ್ತನೆಗಳು ಶತಮಾನಗಳಿಂದ ಜನರನ್ನು ಮತ್ತು ದೇವರನ್ನು ಅಪಮಾನಮಾಡುತ್ತವೆ. ಪೌಲನು ಹೀಗೆ ಬರೆಯುತ್ತಾನೆ,

> ... ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ಕಾಮಾತುರದಿಂದ ಕಾಪಾಡುತ್ತಾರೆ (ರೋಮಾಪುರ 1:26, 27ಎ).

ಅವನು ಹೀಗೆ ಸೇರಿಸುತ್ತಾನೆ, "ದೇವರು ಅವರನ್ನು ಅನಿಷ್ಟಸ್ವಭಾವಕ್ಕೆ ಒಪ್ಪಿಸಿದನು ... ಹೊಟ್ಟೆಕಿಚ್ಚು, ಕೊಲೆ, ಜಗಳ, ಮೋಸ, ಹಗೆತನಗಳಿಂದಲೂ ತುಂಬಿದವರಾದರು" (ರೋಮಾಪುರ 1:28, 29).

ಕ್ರಿಸ್ತನ ಸುವಾರ್ತೆ, ತನ್ನ ಬೇಡಿಕೆಯೊಂದಿಗೆ, ಪ್ರಾಮಾಣಿಕತೆ, ದಾಂಪತ್ಯದಲ್ಲಿ ನಂಬಿಗಸ್ತಿಕೆ ಮತ್ತು ಕರುಣೆಯನ್ನು ತನ್ನ ಗುರುತಾಗಿಸಿಕೊಂಡಿತು. ಒಂದು ಮತ್ತು ಎರಡನೆಯ ಶತಮಾನದಲ್ಲಿ ಕ್ರೈಸ್ತರಿಗೆ ಹಿಂಸೆ ಮತ್ತು ಹಗೆತನವಿರುವ ಸಂದರ್ಭದಲ್ಲಿ, ಕೆಲವರು "ಕ್ಷಮಾಪಣೆ ಕೇಳುವ ಪತ್ರವನ್ನು" ಬರೆದರು. ಸಾಮ್ರಾಜ್ಯದ ಉತ್ತಮವಾದ ನಾಗರೀಕರೆಂದರೆ ಕ್ರೈಸ್ತರು ಎಂದು ಅವರು ವಾದಿಸಿದರು.

ಆದಿಕಾಲದಿಂದಲೂ ಒಂದು ವೇಳೆ ಸಭೆಯು ಕಟ್ಟು ನಿಟ್ಟಾಗಿದ್ದಲ್ಲಿ ಅದು ಜನರನ್ನು ಹಿಂತಿರುಗಿಹೋಗಲು ಅವಕಾಶವನ್ನು ನೀಡುತ್ತದೆ ಎಂದು ವಾದಿಸುತ್ತಿದ್ದರು. ಈ ಜನರನ್ನೇ ಯೂದನು ಎದುರಿಸುತ್ತಾನೆ. ಯೂದನು ಕ್ರೈಸ್ತರು ದೇವರನ್ನು ಮೆಚ್ಚಿಸುತ್ತಾರೆ, ಜನರಲ್ಲ ಎಂದು ಒತ್ತುನೀಡುತ್ತಾನೆ. ದೇವರು ನೈತಿಕ ವಿಶ್ವಾಸಾರ್ಹತೆಯನ್ನು ಬೇಡುತ್ತಾನೆ. ಲೋಕವು ಅದನ್ನು ತಳ್ಳಿಬಿಡುವದಾದರೆ, ಅವರು ಲೋಕದವುಗಳು ಎಂದು ವರ್ಗೀಕರಿಸಿರುವ ಯಾವುದನ್ನು ಅವರು ಮಾಡುವದಿಲ್ಲ. ಸಭೆಯ ಪ್ರಾರಂಭದ ದಿನಗಳಿಂದ ಆಧುನಿಕ ದಿನಗಳ ವರೆಗೆ ಲೋಕವು ಮಾಡುವದನ್ನು ಸ್ವೀಕರಿಸಲು ಸಿದ್ಧರಿರುವ ಮತ್ತು ಆಚರಿಸುವ ಸಿದ್ಧರಿರುವವರು ಇದ್ದಾರೆ. ಇದು ಉದಾತ್ತವಾದದ ಅತ್ಯಂತ ಕೆಟ್ಟ ಅರ್ಥವಾಗಿದೆ.

ಕ್ರಿಸ್ತನ ಆತ್ಮವು ಪಾಪದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವದಿಲ್ಲ. ಜನರು ತಪ್ಪಿಹೋಗಿ ತಮ್ಮ ಪಾಪಗಳಿಂದ ವೇದನೆಯನ್ನು ಅನುಭವಿಸುವಾಗ, ಅವರು ತಮ್ಮ ಜೀವಿತ ವನ್ನು ಬದಲಾಯಿಸಿಕೊಂಡು ಹೊಸ ಪಥದಲ್ಲಿ ನಡೆಯುವಾಗ, ಕ್ರಿಸ್ತನನ್ನು

ಆಲಿಸುತ್ತಿರುವ ಯಾರೊಬ್ಬರು ಆತನಿಗೆ ಬೆನ್ನು ಹಾಕುವದಿಲ್ಲ. ಅನೇಕ ಕ್ರೈಸ್ತರ ಜೀವಿತದಲ್ಲಿ ಅವರು ಮರೆತುಬಿಡಲು ಬಯಸುವ ಸಂಗತಿಗಳಿವೆ. ಯಾವ ಕ್ರೈಸ್ತರು ಪಾಪಿಯನ್ನು ಆತನ ಪಾಪಗಳಿಂದ ಅವನ ತಲೆಯನ್ನು ಜಜ್ಜುವದಿಲ್ಲ. ಯೂದನ ಮಾತುಗಳು ಕೃಪೆಯಿಂದ ತುಂಬಿವೆ, "ಸಂದೇಹ ಪಡುವ ಕೆಲವರಿಗೆ ಕರುಣೆಯನ್ನು ತೋರಿಸಿರಿ; ಅವರನ್ನು ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ. ಕೆಲವರನ್ನು ಭಯಯುಕ್ತರಾಗಿ ಕರುಣಿಸಿರಿ; ಹೊಲಸು ನಡತೆಯಿಂದ ಮೈಲಿಗೆಯಾದ ಅವರ ಅಂಗಿಯನ್ನು ಅಸಹ್ಯಿಸಿರಿ" (ವಚನಗಳು 22, 23).

ಪಶ್ಚಾತಾಪಕ್ಕೆ ಕರುಣಾಪೂರಿತವಾದ ಕ್ಷಮಾಪಣೆ ಅಗತ್ಯವಾಗಿದೆ, ಆದರೆ ಕ್ರಿಸ್ತನ ಹಿಂಬಾಲಕರು ಕ್ರೈಸ್ತ ಗಂಡನು ತನ್ನ ಹೆಂಡತಿಗೆ ಮೋಸಮಾಡುತ್ತಿದ್ದರೆ ಅಥವಾ ಕ್ರೈಸ್ತ ವ್ಯಾಪಾರಿ ತನಗೆ ಸಾಧ್ಯ ಎಂದು ಜನರಿಗೆ ಮೋಸ ಮಾಡುವದು ಅಥವಾ ಲೈಂಗಿಕ ಅನೈತಿಕತೆಯನ್ನು ಸಾಮಾನ್ಯವಾಗಿ ತೆಗೆದುಕೊಳ್ಳುವದು ಇವೆಲ್ಲವೂ ಏನೂ ತಪ್ಪಿಲ್ಲ ಎಂದು ನಟಿಸಬಾರದು. "ಉದಾತ್ತವಾದವು" ನಮ್ಮೊಂದಿಗೆ ವಿಭಿನ್ನವಾಗಿರುವವರಿಗೆ ವಿವೇಚನೆಯಿಲ್ಲದೆ ನೇತುಹಾಕುವ ಕೊರಳ ಪಟ್ಟಿಗಳಲ್ಲ, ಆದರೆ ಇದು ಅರ್ಥಹೀನವಾದ ಪದವಲ್ಲ. ಊದಾತ್ತವಾದವು ಕ್ರೈಸ್ತರನ್ನು ವೈಯಕ್ತಿಕವಾಗಿ ಮತ್ತು ಸಂಪೂರ್ಣಸಭೆಯಾಗಿ ಹಾಳು ಮಾಡಬಹುದಾದ್ದು ಮತ್ತು ಹಾಳು ಮಾಡುವದಾಗಿದೆ.

(2) *ಯೂದನು ಉದಾತ್ತವಾದದ ಬೋಧಕರನ್ನು ಸಭೆಯ ಆರಾಧನೆ, ಐಕ್ಯತೆ ಮತ್ತು ಆಡಳಿತದಲ್ಲಿ ದೇವರ ಮಾರ್ಗದರ್ಶನವನ್ನು ಅನುಸರಿಸುವದರಲ್ಲಿ ಸ್ವಲ್ಪ ಆಸಕ್ತಿಯನ್ನು ತೋರಿಸುವವರನ್ನು ಎದುರಿಸುತ್ತಾನೆ.* ದೇವಜನರು ಆತನನ್ನು ಹೇಗೆ ಆರಾಧಿಸಬೇಕು ಎಂಬುದು ಪರಿಗಣಿಸಲ್ಪಡುತ್ತದೆ. ಒಂದು ವೇಳೆ ದೇವರು ಮಾರ್ಗದರ್ಶನ ನೀಡಿದ್ದರೆ ದೇವಜನರು ಆತನು ಏನು ಹೇಳುತ್ತಾನೋ ಅದನ್ನು ಮಾಡಬೇಕು. ತಪ್ಪಾದ ಮಾರ್ಗದರ್ಶನ ನೀಡುವ ಉದಾತ್ತವಾದವು ಹೊಂದಾಣಿಕೆಗೆ ಸಿದ್ಧವಾಗಿರುತ್ತದೆ. ಈ ರೀತಿಯ ಉದಾತ್ತವಾದವು ಸತ್ಯವೇದವನ್ನು ಹೀಗೆ ಓದುತ್ತದೆ ಮತ್ತು ಹೇಳುತ್ತದೆ, "ಇದು ಕೇವಲ ಅರ್ಥೈಸುವದಾಗಿದೆ, ನಾನು ನನ್ನ ವಿಧದಲ್ಲಿ ಅರ್ಥೈಸಿತ್ತೇನೆ ನೀವು ನಿಮ್ಮ ವಿಧದಲ್ಲಿ ಅರ್ಥೈಸಿರಿ."

ಸತ್ಯವೇದವನ್ನು ಅರ್ಥೈಸುವದು ನಿಖರವಾಗಿ ಒಂದೇ ರೀತಿಯಾಗಿ ಮಾರ್ಗಸೂಚಿಯನ್ನು ಓದುವ ರೀತಿಯಲ್ಲಿ ಇರುವದಿಲ್ಲ, ಆದರೆ ಅದರಲ್ಲಿ ಲಾಭದಾಯಕವಾಗಿರುವ ಹೋಲಿಕೆಯ ಅಂಶಗಳು ಇರುತ್ತವೆ. ನಾನು ಇತ್ತಿಚೆಗೆ ಹುಲ್ಲುಗಾವಲಿನಲ್ಲಿ ಇಡುವ ಪಿಠೋಪಕರಣವನ್ನು ತಂದಿದ್ದೇನು ಅದನ್ನು ಜೋಡಿಸಬೇಕಾಗಿತ್ತು, ನಾನು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿದೆನು, ಆದಾಗ್ಯೂ ಕೆಲವು ಸಂಗತಿಗಳನ್ನು ನಾನು ತಪ್ಪಾಗಿ ಅರ್ಥೈಸಿಕೊಂಡೆನು ಮತ್ತು ನಾನು ತಿರುಗಿ ಹೋಗಿ ಅದನ್ನು ಸರಿಪಡಿಸಿಕೊಳ್ಳಬೇಕಾಯಿತು. ಅವು ನಿಮಗೆ ಸಹಾಯಕವಾಗಬೇಕಾದಲ್ಲಿ ನೀವು ಅವುಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ಹುಲ್ಲುಗಾವಲಿನಲ್ಲಿ ಇಡುವ ಪೀಠೋಪಕರಣಗಳನ್ನು ಜೋಡಿಸುವದಕ್ಕಿಂತ ಜೀವಿತವು ಬಹಳ ಪ್ರಾಮುಖ್ಯವಾಗಿದೆ, ಆದರೆ ದೇವರು ಸೂಚನೆಗಳನ್ನು ನೀಡಿದ್ದಾನೆ. ಅವು ದೇವರು ಯಾವ ಉದ್ದೇಶದಿಂದ ಅವುಗಳನ್ನು ಹೇಳಿದ್ದಾನೆ ಎಂಬ ಅರ್ಥವನ್ನು ನೀಡುತ್ತವೆ. ನಾವು ಸತ್ಯವೇದದ ಬೋಧನೆಯನ್ನು "ಇದು ಕೇವಲ ಅರ್ಥೈಸುವದಕ್ಕಾಗಿ" ಇದು ಪ್ರಾಮುಖ್ಯವೇನಲ್ಲ ಎಂದು ತೆಗೆದುಹಾಕುವದಲ್ಲ.

ಸಭೆಯು ಆರಾಧನೆಗಾಗಿ ಕೂಡಿಬರುವಾಗ ಅದು ಯಾವಾಗ ಕೂಡಿಬರುತ್ತದೆ ಮತ್ತು ಕ್ರೈಸ್ತರು ಆ ಸಭೆಯಲ್ಲಿ ಏನು ಮಾಡಬೇಕು ಎಂಬುದು ಪರಿಗಣಿಸಲ್ಪಡುತ್ತದೆ. ಅವರದೇ ಆದ ಯೋಜನೆಗಳಿಗೆ ಅನುಸಾರವಾಗಿ ಜನರು "ಆರಾಧನೆ" ಎಂದು ಕರೆಯುತ್ತಾರೆ ಮತ್ತು ತಮಗೆ ಯಾವುದು ಇಷ್ಟವೋ ಆ ರೀತಿಯಲ್ಲಿ ಮಾಡುತ್ತಾರೆ. ದೇವರಿಗೆ ಗೌರವವನ್ನು ತರದೆಯಿರುವ ಕೆಲವು ಚಟುವಟಿಕೆಗಳನ್ನು ಜನರು ಆರಾಧನೆ ಎಂದು ಹೇಳುತ್ತಾರೆ. ನಾನು ಇತ್ತೀಚೆಗೆ

ದೂರದರ್ಶನದಲ್ಲಿ ದೇವಾಲಯದಲ್ಲಿ ನೆರೆದು ಬಂದ ದೊಡ್ಡ ಸಭೆಯಲ್ಲಿ ದೇಹದ್ರಾಢ್ಯತೆಯ ತಂಡದವರು ಪ್ರದರ್ಶಿಸುತ್ತಿರುವದನ್ನು ನೋಡಿದೆನು. ಒಬ್ಬ ಮನುಷ್ಯನು ಸಿಮೆಂಟಿನ ಇಟ್ಟಿಗೆಗಳನ್ನು ಮತ್ತು ದಪ್ಪವಾದ ಚೌಕಗಳನ್ನು ಕೈಯಿಂದ ಒಡೆದನು. ಆದಾದನಂತರ ಸಂದರ್ಶಕರೊಂದಿಗೆ ಮಾತನಾಡುತ್ತಾ, ಆತನು ಹೇಳಿದನು, "ನೀವು ಏನೇ ಮಾಡಿದರು ದೇವರ ಮಹಿಮೆಗಾಗಿ ಮಾಡಿರಿ." ಒಂದು ವೇಳೆ ಈ ಪದಗಳು ಕಿಸಿಗಳ್ಳನಿಗೆ ಅಥವಾ ಅನ್ವಯಿಸಿದ್ದರೆ ಎಂದು ನನಗೆ ಆಶ್ಚರ್ಯವಾಯಿತು. ನಾವು ಮಾಡುವ ಪ್ರತಿಯೊಂದು ಕೃತ್ಯಗಳು - ಆ ಕೃತ್ಯವು ನಿಜವಾಗಿಯೂ ತಪ್ಪಲ್ಲದಿದ್ದರೂ - ಆರಾಧನೆಯಾಗಬೇಕೆಂದೆನಿಲ್ಲ. ದೇವರು ತನಗೆ ಯಾವುದು ಮೆಚ್ಚಿಗೆಯಾಗಿದೆ ಎಂದು ಹೇಳಲು ನಾವು ಅನುಮತಿಸಬೇಕು. ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರು ಅವರಿಗೆ ಬೋಧಿಸಿದಂತೆ ಸಭೆಯು ಆರಾಧಿಸುವದನ್ನು ನಾವು ನೋಡುತ್ತೇವೆ.

ದೇವರು ಸತ್ಯವೇದದಲ್ಲಿ ತಪ್ಪಿಹೋದ ಒಬ್ಬ ಪಾಪಿ ರಕ್ಷಣೆಯನ್ನು ಹೊಂದಲು ಬೇಕಾದ ಮಾರ್ಗವನ್ನು ಕೊಟ್ಟಿದ್ದಾನೆ ಎಂಬುದನ್ನು ಉದಾತ್ತವಾದಿಗಳು ಬಿಟ್ಟುಬಿಡುತ್ತಾರೆ. ಉದಾತ್ತ ವಾದವು ಸತ್ಯವೇದದಲ್ಲಿ ಕೊಟ್ಟಿರುವ ರಕ್ಷಣೆಯ ಯೋಜನೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವದು ಅತ್ಯಂತ ಕೆಟ್ಟದ್ದಾಗಿದೆ. ಅಪೊಸ್ತಲರು ತಪ್ಪಿಹೋದವರ ರಕ್ಷಣೆಯ ವಿಷಯವಾಗಿ ಹೇಳಿರುವದು ಪರಿಗಣಿಸಲ್ಪಡುತ್ತದೆ. ಯೂದನು ತನ್ನ ಶೋತ್ರುಗಳಿಗೆ ಬೇಡಿಕೊಳ್ಳುವದರೊಂದಿಗೆ ತನ್ನ ಪತ್ರವನ್ನು ಪ್ರಾರಂಭಿಸುತ್ತಾನೆ. "ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ಹೋರಾಡಬೇಕೆಂದು ಎಚ್ಚರಿಸುತ್ತಾನೆ" (ವಚನ 3).

(3) *ನಾವು ನಮ್ಮ ಪದಗಳನ್ನು "ಉದಾತ್ತತೆ" ಮತ್ತು "ಉದಾತ್ತವಾದ" ಹೇಗೆ ಉಪಯೋಗಿಸುತ್ತೇವೆ ಎಂಬುದರ ಕುರಿತಾಗಿ ಎಚ್ಚರವಾಗಿರಬೇಕು, ಯಾಕಂದರೆ ಉದಾತ್ತವಾಗಿರುವದು ಯಾವಾಗಲೂ ತಪ್ಪಲ್ಲ. ಕೊಡುವದರಲ್ಲಿ ಉದಾರಿಗಳಾಗಿರುವದು ಒಳ್ಳೇಯದೆ.* ಯೇಸು ಅದರಲ್ಲಿ ಉದಾರಿಯಾಗಿದ್ದನು ಆತನು ತನ್ನನ್ನು ತಾನೇ ಅವಶ್ಯಕತೆಯಲ್ಲಿರುವವರಿಗಾಗಿ ಉಚಿತವಾಗಿ ಕೊಟ್ಟನು. ಉದಾತ್ತವಾಗಿರುವದೆಂದರೆ ನಾವು ಜನರ ಒಳಿತನ್ನು ಚಿಂತಿಸುವದು ಎಂದಾಗುತ್ತದೆ, ನಾವು ಇತರರಿಗಾಗಿ ಉತ್ತಮವಾದದ್ದನ್ನು ಮಾಡುವದರಲ್ಲಿ ತೊಡಗಿಸಿಕೊಳ್ಳುವದಾಗಿದೆ. ಸಭೆಯ ಹೆಚ್ಚು "ಉದಾತ್ತ" ವಾಗಿರಬೇಕಾದ ಪ್ರಾಮುಖ್ಯವಾದ ವಿಧಾನಗಳಿವೆ. ಅದು ಎಷ್ಟು ಕಠಿಣವಾಗಿದೆ ಎಂದರೆ ಕ್ರೈಸ್ತರು ತಪ್ಪಾಗಿ ಅರ್ಥೈಸಿಕೊಂಡಿರುವ ಉದಾತ್ತವಾದವು ದೇವರು ತನ್ನ ಜನರಿಂದ ಬಯಸುವ ನೈತಿಕ ಬೇಡಿಕೆಗಳ ಅಥವಾ ಆತನು ತನ್ನ ಸಭೆಗೆ ಮಾರ್ಗದರ್ಶನಕ್ಕಾಗಿ ನೀಡಿದ ಆಜ್ಞೆಗಳನ್ನು ಕೈಬಿಟ್ಟಿರುವ ವಿಷಯದಲ್ಲಿ ಕ್ರೈಸ್ತರು "ಉದಾತ್ತತೆಯನ್ನು" ಉತ್ತಮವಾದ ಅರ್ಥದಲ್ಲಿ ಸಮಾನಾಂತರಗೊಳಿಸಬೇಕು.

*ಮುಕ್ತಾಯ.* ಲೋಕದಲ್ಲಿ ಅಥವಾ ಸಭೆಯಲ್ಲಿ ನಡೆಯುವ ಸಂಗತಿಗಳನ್ನು ನೋಡಿ ಅನೇಕ ಕ್ರೈಸ್ತರು ಬೇಸರಗೊಳ್ಳುತ್ತಾರೆ. ವಿಶ್ವಾಸಿಗಳು ತಾವು ಉಪಯೋಗಿಸುವ "ಉದಾತ್ತ" ಮತ್ತು "ಉದಾತ್ತವಾದಿಗಳು" ಎಂಬ ಪದದ ವಿಷಯದಲ್ಲಿ ತಾವು ಯೋಚಿಸುವದರ ಕುರಿತು ಅಸಮ್ಮತಿ ತೋರಿಸುವ ಯಾವನ ಕುರಿತಾದರೂ ಎಚ್ಚರವಾಗಿರಬೇಕು. ಈ ಪದಗಳು ನಿಜವಾದ ಆತ್ಮೀಕ ಅಪಾಯವನ್ನು ಸೂಚಿಸುತ್ತವೆ.

---

ಟಿಪ್ಪಣೆಗಳು

[1]This thesis was advanced by John Painter, *Just James: The Brother of Jesus in History and Tradition* (Minneapolis: Fortress Press, 1999). [2]I. Howard Marshall, *New Testament Theology: Many Witnesses, One Gospel* (Downers Grove, Ill: InterVarsity Press, 2004), 698-99. [3]Ibid., 666. [4]John Stott, *The Contemporary Christian* (Leicester, U.K.: Inter-Varsity Press, 1992), 174.